ವಿಶ್ವವಾಣಿ vishwavani.news
28.03.2024 ಗುರುವಾರ

# ಗುರು
ಅರಿವಿನ ಹರವು

## ಅಮೃತ ವಾಹಿನಿ

# ಅಲ್ಪ ವಿದ್ಯಾ ಮಹಾಗರ್ವಿ



● ಬೇಲೂರು ರಾಮಮೂರ್ತಿ

ಅಂದಿನ ಪಾಠದಲ್ಲಿ ಗುರುಗಳು 'ನೀವು ನಿಮ್ಮ ಜೀವನದಲ್ಲಿ ಯಾವತ್ತೂ ಅಲ್ಪ ವಿದ್ಯಾ ಮಹಾ ಗರ್ವಿ ಎನಿಸಿಕೊಳ್ಳಬಾರದು' ಎಂದು ಹೇಳಿದಾಗ ಶಿಷ್ಯರು ನಮ್ಮಲ್ಲಿ ಏನು ತಪ್ಪಾಗಿರಬಹುದು ಎಂದು ಯೋಚಿಸುತ್ತಾ ಕೂತರು. ಗುರುಗಳು ತಮ್ಮ ಮಾತುಗಳನ್ನು ಮುಂದುವರಿಸಿ ನಿಮಗೊಂದು ಕಥೆ ಹೇಳುತ್ತೇನೆ ಕೇಳಿ ಎಂದು ಪ್ರಾರಂಭಿಸಿದರು.

ಒಂದು ಊರಿನಲ್ಲಿ ಒಬ್ಬ ಪಂಡಿತರು ಇದ್ದರು. ಅವರು ಅಲ್ಪ ಸ್ವಲ್ಪ ವಿಚಾರಗಳನ್ನು ತಿಳಿದುಕೊಂಡಿದ್ದರು. ಆದರೆ ನಾನು ತಿಳಿದುಕೊಂಡಿರುವುದೇ ಎಲ್ಲಕ್ಕಿಂತ ಶ್ರೇಷ್ಠ, ನನಗಿಂತ ತಿಳಿದವರು ಇನ್ಯಾರೂ ಇಲ್ಲ ಎನ್ನುವ ಭಾವ ಅವರಲ್ಲಿತ್ತು. ಅದು ಆಗಾಗ ಹೊರಗೆ ಬರುತ್ತಿತ್ತು. ನಾಲ್ಕು ಜನ ಕೂತಿರುವ ಕಡೆ ಈ ಪಂಡಿತರು ತಮ್ಮ ಪಾಂಡಿತ್ಯವನ್ನು ಕೊಚ್ಚಿಕೊಳ್ಳಲು ಶುರು ಮಾಡುತ್ತಿದ್ದರು. ಬೇರೆಯವರಿಗೆ ಏನೋ ಒಂದು ಪ್ರಶ್ನೆ ಹಾಕುವುದು. ಅವರು ಉತ್ತರ ಕೊಡಲು ಸ್ವಲ್ಪ ತಡವಾದಾಗ ಇವರು ತರ್ಕ ಪ್ರಾರಂಭಿಸುತ್ತಿದ್ದರು. ಉದಾಹರಣೆಗೆ ಒಂದು ಕಡೆ ಅವರು ತಮ್ಮ ಜೊತೆ ಇದ್ದವರನ್ನು ನೋಡಿ 'ವೇದ ಎಂದರೇನು?' ಎಂದು ಕೇಳಿದರು. ಈ ರೀತಿಯ ಪ್ರಶ್ನೆಗಳಿಗೆ ಏನು ಉತ್ತರ ಕೊಡಲು ಸಾಧ್ಯವಾದೀತು. ಅದಕ್ಕೆ ಬೇರೆಯವರು ಅವರು ಉತ್ತರ ಕೊಡೋ ಮುಂಚೆಯೇ ಮತ್ತೆ ಈ ಪಂಡಿತರು ಅದಲ್ಲ, ವೇದ ಎಂದರೇನು ಅಂತ ಮತ್ತೆ ಕೇಳಿದರು. ಉತ್ತರ ಕೊಡೋಕೆ ಬಿಡಿ ಸ್ವಾಮಿ ಅಂದು ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣ ವೇದ ಎಂದು ಹೇಳಿದರೆ, ಅದಲ್ಲ ವೇದ ಎಂದರೇನು ಅಂತ ಮತ್ತೆ ಕೇಳಿದರು.

ಅವರೆಲ್ಲಾ ನಮಗೆ ಗೊತ್ತಿಲ್ಲ ಅಂದರು. ಆಗ ಈ ಪಂಡಿತರು ನೀವು ಯಾವ ಸೀಮೆ ಪಂಡಿತರು, ಅಲ್ಲಲ್ಲಿ ಹೋಗಿ ಉಪನ್ಯಾಸ ಮಾಡುತ್ತೀರ, ಪೂಜೆ ಪುನಸ್ಕಾರ ಮಾಡುತ್ತೀರ, ವೇದ ಅಂದರೆ ಏನು ಎಂದೇ ತಿಳಿದುಕೊಂಡಿಲ್ಲ ಅಂದು ಅಣಕಿಸಿದರು. ಬೇರೆ ಪಂಡಿತರಿಗೆ ಜಿಗುಪ್ಸೆ ಆಗಿ ಹಾಗಾದರೆ ನೀವೇ ಹೇಳಿ ಸ್ವಾಮಿ ವೇದ ಎಂದರೇನು ಅಂತ ಕೇಳಿದರು. ಹಾಗೆ ಬನ್ನಿ ದಾರಿಗೆ, ನೋಡಿ ವಿಚಾರಗಳನ್ನು ಸರಿಯಾಗಿ ತಿಳಿದುಕೊಳ್ಳಬೇಕು ಆಮೇಲೆ ಬೇರೆಯವರಿಗೆ ಹೇಳಬೇಕು. ವೇದಗಳು ಎಂದರೆ ಅದು ಅಪೌರುಷೇಯ ಅಂದರೆ ಯಾರಿಂದಲೂ ರಚಿತವಾಗಿದ್ದಲ್ಲ. ಅದು ಮೊದಲೇ ಇತ್ತು. ಅವುಗಳನ್ನು ಸಾಮಾನ್ಯ ಜನರ ಅನುಕೂಲಕ್ಕೆ ತಕ್ಕಂತೆ ವಿಭಾಗಿಸಿದವರು ವೇದವ್ಯಾಸರು ಎಂದು ಆ ಪಂಡಿತರು ಇನ್ನೂ ಮಾತಾಡುತ್ತಿರುವಂತೆಯೇ ಮಿಕ್ಕವರು ಅಲ್ಲಿಂದ ಎದ್ದು ಹೋದರು. ಮತ್ತೆ ಆ ಪಂಡಿತರು ಇರುವ ಕಡೆ ಯಾರೂ ಹೋಗುತ್ತಿರಲಿಲ್ಲ, ಒಂದು ವೇಳೆ ಹೋದರೂ ಅವರೊಡನೆ ಮಾತಿಗೆ ನಿಲ್ಲುತ್ತಿರಲಿಲ್ಲ.

ಕಥೆ ಮುಗಿಸಿದ ಗುರುಗಳು 'ನೋಡಿ ಇಂಥವರನ್ನೇ ಅಲ್ಪ ವಿದ್ಯಾ ಮಹಾ ಗರ್ವಿ ಎನ್ನುವುದು. ನೀವೆಲ್ಲಾ ಬದುಕಿನಲ್ಲಿ ಮೇಲೆ ಮೇಲೆ ಹೋಗುತ್ತಿದ್ದಂತೆ ಹೆಚ್ಚು ಹೆಚ್ಚು ವಿಚಾರಗಳನ್ನು ವಿದ್ಯೆಗಳನ್ನು ಕಲಿಯಿರಿ. ಅವುಗಳನ್ನು ಮತ್ತೊಬ್ಬರ ಮುಂದೆ ಪ್ರಸ್ತಾಪ ಮಾಡುವಾಗ ನೋಡಿದ್ಯಾ ಇದು ನನಗೆ ತಿಳಿದಿದೆ, ನಿನಗೆ ತಿಳಿದಿಲ್ಲ ಎನ್ನುವ ಅಹಂಕಾರ ಬೇಡ. ನಾವು ಎಷ್ಟೇ ತಿಳಿದಿದ್ದೀವೆ ಅಂದುಕೊಂಡರೂ ನಮಗಿಂತ ತಿಳಿದವನು ಇನ್ನೊಬ್ಬ ಇದ್ದೇ ಇರುತ್ತಾನೆ. ಗೊತ್ತಿರುವ ವಿಚಾರಗಳನ್ನು ಸರಿಯಾದ ರೀತಿಯಲ್ಲಿ ಪ್ರತಿಪಾದಿಸುವುದು ಮತ್ತು ಅವುಗಳನ್ನು ನನಗೆ ಮಾತ್ರ ತಿಳಿದಿದೆ ಬೇರೆಯವರಿಗೆ ತಿಳಿದಿಲ್ಲ ಎನ್ನುವ ಹಾಗೆ ಅಣಕಿಸಿ ಮಾತಾಡುವುದು ತಪ್ಪು. ಇದು ನಿಜವಾದ ವಿದ್ಯಾವಂತನ ಲಕ್ಷಣ ಅಲ್ಲ. ನೀವುಗಳು ಯಾರೂ ವಿದ್ಯಾ ಮಹಾ ಗರ್ವಿಗಳಾಗಬಾರದು ಎನ್ನುವುದೇ ನನ್ನ ಉದ್ದೇಶ' ಎಂದು ಅಂದಿನ ಪಾಠ ಮುಗಿಸಿದರು.


## ಅಧ್ಯಾತ್ಮ ಕಥಾಂಜಲಿ

# ಹೃದ್ಗೋಚರ ಸೂತ್ರಗಳು

● ಮಾಯಾ ಬಾಲಚಂದ್ರ

ಝೆನ್ ಸನ್ಯಾಸಿ ತೆತ್ಸುಗೆನ್‌ಗೆ ತಮ್ಮ ಪಂಥದ ಸಿದ್ಧಾಂತಗಳ ಬಗ್ಗೆ ಅಪಾರ ನಂಬಿಕೆ, ಶ್ರದ್ಧೆ. ಈ ಸಿದ್ಧಾಂತಗಳನ್ನು ಅತಿ ಹೆಚ್ಚು ಪ್ರಚಾರ ಮಾಡಬೇಕೆಂಬುದು ಅವನ ಪರಮೋಚ್ಚ ಗುರಿ. ಆ ಸಮಯದಲ್ಲಿ ಮುದ್ರಣ ಪ್ರಯಾಸದ ಕೆಲಸ. ಮರದ ತುಂಡಿನ ಮೇಲೆ ಅಕ್ಷರಗಳನ್ನು ಕೆತ್ತಿ, ನಂತರ ಅದನ್ನು ಮಸಿಯಲ್ಲಿ ಅದ್ದಿ, ಬಟ್ಟೆ ಅಥವಾ ಲಭ್ಯವಿರುವ ಕಾಗದದ ಮೇಲೆ ಒತ್ತಿ ಪ್ರತಿ ಮಾಡಬೇಕಿತ್ತು. ಇದು ಶ್ರಮ, ಸಮಯದೊಂದಿಗೆ ಹಣದ ಸಂಪನ್ಮೂಲವನ್ನೂ ಬೇಡುವಂತದ್ದು. ಸಂಪನ್ಮೂಲ ಹೊಂದಿಸಲು ಊರಿಂದ ಊರಿಗೆ ತಿರುಗಿ, ಪ್ರವಚನಗಳನ್ನು ಮಾಡುತ್ತಾ, ದಾನ ಪಡೆಯುತ್ತಾ ಸಾಗಿದ. ಹಣ ಸಂಗ್ರಹಿಸಿ, ಮುದ್ರಣ ಮಾಡಬೇಕೆನ್ನುವಾಗ ಊಜಿ ನದಿಗೆ ಪ್ರವಾಹ ಬಂದು, ಜನರು ಆಸ್ತಿಪಾಸ್ತಿ ಕಳೆದುಕೊಂಡು ನಿರ್ಗತಿಕರಾದರು. ತಾನು 10 ವರ್ಷಗಳಿಂದ ಸಂಗ್ರಹಿಸಿದ್ದ ಹಣವನ್ನೆಲ್ಲ ನಿರಾಶ್ರಿತರ ಅನುಕೂಲಗಳಿಗಾಗಿ ತೆತ್ಸುಗೆನ್ ಹಂಚಿಬಿಟ್ಟ. ಶಿಷ್ಯರು ಚಿಂತಾಕ್ರಾಂತರಾದರು. ಆದರೆ ತೆತ್ಸುಗೆನ್ ಆನಂದದಿಂದಿದ್ದ.

ಮತ್ತೆ ಮುಂದಿನ 15 ವರ್ಷಗಳ ಪ್ರಯತ್ನದಲ್ಲಿ ಒಂದಿಷ್ಟು ಹಣ ಸಂಗ್ರಹವಾಯಿತು. ಜೊತೆಗೆ ಆತನ ವಯಸ್ಸೂ ಹೆಚ್ಚಾಗಿತ್ತು. ಮುದ್ರಣ ಕಾರ್ಯಕ್ಕೆ ತೊಡಗಬೇಕೆನ್ನುವಷ್ಟರಲ್ಲಿ ಅವರಿದ್ದ ಕ್ಯೋಟೋ ಪ್ರದೇಶದಲ್ಲಿ ಕಾಲರಾ ಕಾಣಿಸಿಕೊಂಡಿತು. ಇಡೀ ಊರು ಸ್ಮಶಾನ ಸದೃಶವಾಗತೊಡಗಿತು. ಕಿಂಚಿತ್ತೂ ಚಿಂತಿಸದೆ ಹಣವನ್ನು ಜನಸೇವೆಗೆ ಬಳಸಿಬಿಟ್ಟ. ಈ ಬಾರಿ ಶಿಷ್ಯರಿಗೆ ಗುರುವಿನ ಬಗ್ಗೆ ಅಭಿಮಾನ.



ಆದರೆ ತೆತ್ಸುಗೆನ್ ಮಹತ್ವಾಕಾಂಕ್ಷೆಯನ್ನೇನೂ ಬದಿಗಿರಿಸಲಿಲ್ಲ. ತನ್ನ ಇಳಿ ವಯಸ್ಸಿನ ಮುಂದಿನ ಹದಿನೈದು ವರ್ಷಗಳು ಮತ್ತೆ ಊರೂರು ಅಲೆದು ಹಣ ಸಂಗ್ರಹ ಮಾಡಿದ. ಕೊನೆಗೂ 7,000 ಪ್ರತಿಗಳನ್ನು ಮುದ್ರಿಸುವಲ್ಲಿ ಯಶಸ್ವಿಯಾದ. ಶಿಷ್ಯರು ಅದನ್ನೆಲ್ಲ ಹಂಚಿ ಧನ್ಯತೆ ಪಡೆದರು. ಇಂದಿಗೂ ಜಪಾನ್‌ನ ಕ್ಯೋಟೋದಲ್ಲಿರುವ ಮ್ಯೂಸಿಯಂನಲ್ಲಿ ಮೂಲ ಮುದ್ರಿತ ಪ್ರತಿಯನ್ನು ಕಂಡವರು ಧನ್ಯತಾ ಭಾವವನ್ನು ವ್ಯಕ್ತಪಡಿಸುತ್ತಾರೆ. 'ತೆತ್ಸುಗೆನ್‌ನ ಮೊದಲೆರಡು ಮುದ್ರಣಗಳು ಜನರ ಹೃದಯದ ಮೇಲಾಗಿದ್ದರೆ, ಮೂರನೆಯದು ಕಾಗದದ ಮೇಲಾಗಿದೆ' ಎಂಬುದು ಅಲ್ಲಿನ ಜನರ ಮಾತು.

ಕಾಗದದ ಮೇಲೆ ಮುದ್ರಿತ ಸೂತ್ರಗಳಿಗಿಂತ ಜನರ ಆಪತ್ಕಾಲಕ್ಕೆ ಆಧಾರವಾಗಬಲ್ಲ ಜೀವನ ಸೂತ್ರಗಳು ಜನ ಮಾನಸದಲ್ಲಿ ನೆಲೆ ನಿಲ್ಲುತ್ತವೆ. ದೀನರ ಸೇವೆಗಿಂತ ಹಿರಿದಾದ ಭಗವಂತನ ಸೇವೆ ಇಲ್ಲ. ದಯೆ, ಕರುಣೆ ಎಲ್ಲವೂ ಜೀವಂತ ಪ್ರಕ್ರಿಯೆಗಳಾದಾಗ ಪುಸ್ತಕದ ಸಿದ್ಧಾಂತಗಳು ಜೀವತಳೆಯುತ್ತವೆ. ಜೀವನದ ಗುರಿಯಡೆಗೆ ಸಾಗುವಾಗ ಸಮಾಜದ ಕಷ್ಟಗಳಿಗೆ ಸ್ಪಂದಿಸುತ್ತಾ ಸಾಗಿದರೆ, ಗುರಿ ಮುಟ್ಟಿದಾಗ ಪಡೆಯುವ ಸಂತೋಷ, ಧನ್ಯತಾ ಭಾವ ಕೇವಲ ವೈಯಕ್ತಿಕವಾಗಿ ಉಳಿಯುವುದಿಲ್ಲ, ಅದು ಇಡೀ ಸಮಾಜದ್ದಾಗುತ್ತದೆ.

---

**ಪ್ರತಿ ವರ್ಷ ಎಪ್ರಿಲ್ ಮೊದಲ ಮತ್ತು ಎರಡನೆಯ ವಾರದಲ್ಲಿ ನಮ್ಮ ದೇಶದಾದ್ಯಂತ ಹಲವು ಹಬ್ಬಗಳು ಆಚರಣೆಗೊಳ್ಳುತ್ತವೆ. ಯುಗಾದಿ, ವಿಶು, ಉತ್ತರ ಭಾರತದಲ್ಲಿ ಬೈಶಾಕಿ. ಹೊಸ ವರ್ಷವನ್ನು ಸ್ವಾಗತಿಸುವ ಈ ಹಬ್ಬದ ಸಾರ್ವತ್ರಿಕತೆ ಬೆರಗು ಹುಟ್ಟಿಸುವಂತಹದು. ಅಸ್ಸಾಂನ ಜನಪದರು ಎಪ್ರಿಲ್‌ನಲ್ಲಿ ಸಂಭ್ರಮದಿಂದ ಆಚರಿಸುವ ಬಿಹೂ ಹಬ್ಬವು, ಕೃಷಿಯ, ಫಲವಂತಿಕೆಯ ಹಬ್ಬ, ಸಂಭ್ರಮ.**

# ಬೇಸಗೆಗೆ ಮೆರುಗು ತರುವ ಹಬ್ಬಗಳು

● ಶ್ರೀನಿವಾಸ ಜೋಕಟ್ಟೆ ಮುಂಬಯಿ

ಕೃಷಿಗೆ ಸಮರ್ಪಿತ ಪೂರ್ವೋತ್ತರದ ಪ್ರಮುಖ ಹಬ್ಬ ಬಿಹೂ. ಅಸ್ಸಾಮಿನ ಜನರ ಹೊಸ ವರ್ಷದ ಆರಂಭವನ್ನು ಈ ಹಬ್ಬ ನೆನಪಿಸುತ್ತದೆ. ಎಪ್ರಿಲ್ ತಿಂಗಳ ಮಧ್ಯದಲ್ಲಿ ಬರುವ ಈ ಬೊಹಾಗ್ ಬಿಹೂ ಅಥವಾ ರೊಂಗಾಲಿ ಬಿಹೂ, ಅಸ್ಸಾಮ್‌ನ ರಾಷ್ಟ್ರೀಯ ಹಬ್ಬವಾಗಿದೆ.

ಎಪ್ರಿಲ್ ಮಾಸ ಬರುತ್ತಲೇ ಅಸ್ಸಾಮ್‌ನ ಜನರಲ್ಲಿ ಇನ್ನಿಲ್ಲದ ಉತ್ಸಾಹ. ಫಸಲು ಬರುವ ದಿನಗಳು. ನವವರ್ಷದ ಆಗಮನ. ಇಂತಹ ವಾತಾವರಣದಲ್ಲಿ ಗಮನ ಸೆಳೆಯುವುದೇ ಬಿಹೂ. ಇದು ಪಾರಂಪರಿಕ ಗೀತೆ ಮತ್ತು ನೃತ್ಯಗಳ ಸಂಗಮ, ಅಸ್ಸಾಮ್ ಜನರ ಖುಷಿ ಮತ್ತು ಉತ್ಸಾಹ. ಇದಕ್ಕೆ ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಮಾನ್ಯತೆಗಳೂ ಇವೆ. ಮಾನವ ಮತ್ತು ಪರಿಸರದ ಹಿತವನ್ನು ಅಳವಡಿಸಿರುವ ಪರಂಪರಾಗತ ಗೀತೆ, ನೃತ್ಯಗಳ ಸಮ್ಮಿಲನವೇ ಬಿಹೂ. ತಿಂಗಳಿಡೀ ಇದರ ಸಂಭ್ರಮ ಕಾಣಬಹುದು. ಬೊಹಾಗ್ ಬಿಹೂ ಬಿತ್ತನೆಯ ಸಮಯದ ಆಗಮನವನ್ನು ಸೂಚಿಸುತ್ತದೆ, ಕಟಿ ಬಿಹೂ ಸಸಿಗಳ ಬಿತ್ತನೆ ಮತ್ತು ಕಸಿ ಪೂರ್ಣಗೊಳಿಸುವಿಕೆಯನ್ನು ಸೂಚಿಸುತ್ತದೆ. ಮತ್ತು ಅಂತಿಮವಾಗಿ, ಮಾಘ ಬಿಹೂ (ಜನವರಿ ಅಥವಾ ಫೆಬ್ರವರಿ) ಕೊಯ್ಲು ಅವಧಿಯ ಪರಾಕಾಷ್ಠೆಯನ್ನು ಸೂಚಿಸುತ್ತದೆ. ಬಿಹೂ ಎನ್ನುವುದು ಧಾನ್ಯ ಅಕ್ಕಿಯ ಫಸಲು ಆಧಾರಿತ ಪರ್ವವೂ ಆಗಿದೆ.



## ಸ್ಪರ್ಧೆಗಳು

ಚೈತ್ರ ಮಾಸದಲ್ಲಿ ಬರುವ ರೊಂಗಾಲಿ ಬಿಹೂ ಅಥವಾ ಬೊಹಾಗ್ ಬಿಹೂ ಇದನ್ನು ಏಳು ದಿನಗಳ ಕಾಲ ಮಹಾಪರ್ವವಾಗಿ ಆಚರಿಸುತ್ತಾರೆ. ಪ್ರತೀದಿನಕ್ಕೂ ಅದರದೇ ಆದ ಮಹತ್ವವಿದೆ. ಈ ಸಮಯ ಕ್ರೀಡಾ ಸ್ಪರ್ಧೆಗಳು ಜರಗುತ್ತವೆ. ಅಸ್ಸಾಮ್ ಪತ್ರಿಕೆಗಳು ಬಿಹೂ ನೃತ್ಯ ಸ್ಪರ್ಧೆ ಏರ್ಪಡಿಸಿ ಬಹುಮಾನ ನೀಡುತ್ತವೆ.

ಬಿಹೂ ಎನ್ನುವ ಶಬ್ದ ದಿಮಾಸ ಜನರ ಭಾಷೆಯಿಂದ ಬಂದಿದೆ. ಬಿ ಎಂದರೆ ವಿಚಾರಿಸುವುದು ಮತ್ತು ಶು ಅಂದರೆ ವಿಶ್ವದಲ್ಲಿ ಶಾಂತಿ ಸಮೃದ್ಧಿ ಎನ್ನುವುದಾಗಿದೆ .ಈ 'ಬಿಶು' ಅಪಭ್ರಂಶವಾಗಿ 'ಬಿಹೂ' ಆಗಿದೆಯಂತೆ. ನಮ್ಮ ಕರಾವಳಿಯಲ್ಲಿ ಇದೇ ಸಮಯದಲ್ಲಿ ಆಚರಿಸುವ ಬಿಶು ಅಥವಾ ವಿಶು ಹಬ್ಬವನ್ನು ನೆನಪಿಸಿಕೊಳ್ಳಬಹುದು.

ಚೈತ್ರದ ಬಿಹೂಗೆ ಮೊದಲ ಫಸಲು ದೇವರಿಗೆ ಅರ್ಪಣೆ. ಪಾರಂಪರಿಕ ಧೋತಿ, ಗಮೊಸಾ (ಗಮೊಛಾ), ಬಣ್ಣದ ಬುಟ್ಟಿ, ಸಮೂಹ ಗೀತೆ- ನೃತ್ಯ, ಬಿಹೂ ವಿಶೇಷ ಅಡುಗೆ ತಿಂಡಿ..... ಇವೆಲ್ಲ ಬಿಹೂ ಆಚರಣೆಯ ಭಾಗ. ತೆಂಗಿನಕಾಯಿಯ ಲಡ್ಡೂ, ಎಳ್ಳಿನ ಬರ್ಫಿ, ಫಿಲಾ ಪೀಠಾ, ಫಿಶ್ ಪೀಠಿಕಾ, ಆಲೂ ಪೀಠಿಕಾ, ಬೆನಗೆನಾ ಖಾರ್, ಜಾಕ್, ಮಸೋರಾ,ಟೆಂಗಾ,..ಹೀಗೆ ಸ್ಥಳೀಯ ತಿಂಡಿ ತಿನಿಸು ವಿಶೇಷವಾಗಿ ತಯಾರಿಸಿ ಹಂಚುತ್ತಾರೆ.

ವೈವಿಧ್ಯಗಳು: ಬೊಹಾಗ್ ಅಥವಾ ರೊಂಗಾಲಿ ಬಿಹೂ ಏಪ್ರಿಲ್ 14 ರಂದು ಪ್ರಾರಂಭವಾಗುತ್ತದೆ ಮತ್ತು ಏಳು ದಿನಗಳವರೆಗೆ ಆಚರಿಸಲಾಗುತ್ತದೆ. ಬಿಹೂವಿನ ಮೊದಲ ದಿನವನ್ನು 'ಗರು ಬಿಹೂ' ಎಂದು ಕರೆಯಲಾಗುತ್ತದೆ. ಈ ದಿನ ಮನೆಯ ಜಾನುವಾರುಗಳನ್ನು ನದಿಗೆ ತೆಗೆದುಕೊಂಡು ಹೋಗಿ ಸ್ನಾನ ಮಾಡಿಸುತ್ತಾರೆ ಮತ್ತು ಜನರು ತಮ್ಮ ಜಾನುವಾರುಗಳ ಯೋಗಕ್ಷೇಮ ಮತ್ತು ಸುರಕ್ಷತೆಗಾಗಿ ಪ್ರಾರ್ಥಿಸುತ್ತಾರೆ.

'ಮನುಹ್ ಬಿಹೂ' ಎಂದು ಕರೆಯಲ್ಪಡುವ ಬಿಹೂವಿನ ಎರಡನೇ ದಿನದಂದು ಅರಿಶಿನದ ಪುಡಿಯಿಂದ ಸ್ನಾನ ಮಾಡುತ್ತಾರೆ. ವಿವಿಬಿಹೂ ಕಾರ್ಯಕ್ರಮಗಳು ವಿವಿಧ ಪ್ರದೇಶಗಳಲ್ಲಿ ಅದ್ದೂರಿಯಿಂದ ನಡೆಯುತ್ತವೆ. ನೆರೆಹೊರೆಯವರು ಮತ್ತು ಸಂಬಂಧಿಕರನ್ನು ಭೇಟಿಯಾಗಿ ಪರಸ್ಪರ ಶುಭಾಶಯ ಕೋರಿ, ಕುಟುಂಬದ ಹಿರಿಯರಿಗೆ ಹೊಸ ಗಮೋಛಾ (ಸಾಂಪ್ರದಾಯಿಕ ಅಸ್ಸಾಮಿ ಜನರ ಕೈಯಿಂದ ನೇಯ್ದ ಹತ್ತಿಯ ನೂಲಿನ ಟವೆಲ್) ನ್ನು ನೀಡುವ ಮೂಲಕ ಗೌರವ ಸಲ್ಲಿಸುತ್ತಾರೆ.

ಬಿಹೂವಿನ ಮರುದಿನವು ಮನೆಯ ದೇವತೆಗಳ 'ಗುಕ್ಸಾಯ್ ಬಿಹೂ'. ನಾಲ್ಕನೆಯ ದಿನವು ಕೈಮಗ್ಗಗಳಿಗೆ ಆದ್ಯತೆಯ ತಾತೂರ್ ಬಿಹೂ' ಎನ್ನುತ್ತಾರೆ. ಮುಂದೆ ಕೃಷಿ ಉಪಕರಣಗಳಿಗೆ ''ನಂಗೊಳೂರು ಬಿಹೂ' ಬರುತ್ತದೆ.ಆರನೇ ದಿನ 'ಫರೋಸಿಯಾ ಜಿಬರ್ ಬಿಹೂ' ಸಾಕು ಪ್ರಾಣಿಗಳಿಗೆ ಮೀಸಲಾಗಿದೆ. ಏಳನೇ ಮತ್ತು ಕೊನೆಯ ದಿನವನ್ನು 'ಚೇರ ಬಿಹೂ' ಎಂದು ಕರೆಯಲಾಗುತ್ತದೆ.

## ನೃತ್ಯ ಶಿಬಿರ

**ಬೊಹಾಗ್ ಬಿಹೂ ಅಥವಾ ರೊಂಗಾಲಿ ಬಿಹೂ ಅಸ್ಸಾಮ್‌ನಲ್ಲಿ ಪ್ರತಿ ವರ್ಷ ಎಪ್ರಿಲ್ 14 ರಿಂದ ಎಪ್ರಿಲ್16 ರ ತನಕ ಸರಕಾರಿ ಗೌರವದೊಂದಿಗೆ ಮೂರು ದಿನಗಳ ವಿಶೇಷ ಕಾರ್ಯಕ್ರಮಗಳು ಅಸ್ಸಾಮ್ ರಾಜ್ಯಾದ್ಯಂತ ಕಂಡುಬಂದರೆ, ಅತ್ತ ಬಿಹೂ ಸಂಭ್ರಮ ಅಲ್ಲಿನ ಜನರಲ್ಲಿ ಒಂದು ವಾರ ಕಾಲ ಇರುತ್ತದೆ. ಎಪ್ರಿಲ್ ಒಂದರಿಂದಲೇ ಬಿಹೂ ನೃತ್ಯ ಕಲಿಕಾ ಶಿಬಿರಗಳು ಅನೇಕ ಕಡೆ ನಡೆಯಲು ಆರಂಭವಾಗುತ್ತವೆ. ನೂರಾರು ಸಂಖ್ಯೆಯಲ್ಲಿ ಮಕ್ಕಳು ಪ್ರತಿಯೊಂದು ಶಿಬಿರದಲ್ಲೂ ಪಾಲ್ಗೊಂಡು ಬಿಹೂ ನೃತ್ಯ ಕಲಿಯುತ್ತಾರೆ.**



## ಜಾನಪದ ನೃತ್ಯ

ನೃತ್ಯ ಮತ್ತು ಹಾಡುಗಳು ಈ ಬಿಹೂವಿನ ಮುಖ್ಯ ಲಕ್ಷಣಗಳಾಗಿವೆ. ಬೊಹಾಗ್ ಬಿಹೂಗೆ ಸಂಬಂಧಿಸಿದ ಜಾನಪದ ಹಾಡುಗಳನ್ನು 'ಬಿಹೂ ಗೀತ್' ಎಂದು ಕರೆಯಲಾಗುತ್ತದೆ, ಇದು ಹಳ್ಳಿಯ ಯುವಕರಲ್ಲಿ ಪ್ರೀತಿಯ ಸಾಂಕೇತಿಕ ಸಂವಹನವಾಗಿದೆ. ನೃತ್ಯಗಳು ಸಾಂಪ್ರದಾಯಿಕ ಅಸ್ಸಾಮಿ ವಾದ್ಯಗಳೊಂದಿಗೆ ಇರುತ್ತವೆ. ಹುಡುಗಿಯರು ತಮ್ಮ ಪ್ರಿಯಕರನಿಗೆ ಪ್ರಸ್ತುತಪಡಿಸಲು ಬಿಹುವನ್ ನೇಯ್ಗೆಯಲ್ಲಿ ಈ ಸಮಯ ನಿರತರಾಗುತ್ತಾರೆ. ಬಿಹೂ ಹಬ್ಬದಲ್ಲಿ ಗಮೋಛಾಗೆ ಹೆಚ್ಚಿನ ಪ್ರಾಮುಖ್ಯತೆ. ಪ್ರತಿ ಅತಿಥಿಯನ್ನು ಜಾಪಿ ಮತ್ತು ಗಮೋಛಾದಿಂದ ಉಪಚರಿಸಲಾಗುತ್ತದೆ. ಗಮೋಛಾ ಇಲ್ಲದೆ ಅಸ್ಸಾಮಿ ಸಂಸ್ಕೃತಿ ಅಪೂರ್ಣ.

## ಮೂರು ರೀತಿಯ ಬಿಹೂ

**ವರ್ಷಕ್ಕೆ ಮೂರು ರೀತಿಯಲ್ಲಿ ಬಿಹೂ ಆಚರಿಸಲಾಗುತ್ತದೆ. ಬೇರೆ ಬೇರೆ ಕೃಷಿ ಚಕ್ರಗಳಿವು. ಎಪ್ರಿಲ್ ಮಾಸದ ಸೌರಮಾನ ಯುಗಾದಿ ಅರ್ಥಾತ್ ವಿಷು ಸಂಕ್ರಮಣದ ಬಿಹೂಗೆ ಹೆಚ್ಚಿನ ಸಂಭ್ರಮ. ಎಪ್ರಿಲ್ ತಿಂಗಳಲ್ಲಿ ಬರುವ ಬಿಹೂವನ್ನು ರೊಂಗಾಲಿ ಬಿಹೂ ಎಂದೂ ,ಅಥವಾ ಬೊಹಾಗ್ ಬಿಹೂ ಎಂದೂ ಎರಡೂ ಹೆಸರಿನಿಂದ ಕರೆಯುವುದಿದೆ.**

**ಕಾರ್ತಿಕ ಮಾಸದಲ್ಲಿ ಬರುವ ಬಿಹೂ ಕಂಗಾಲೀ (ಕೊಂಗಾಲೀ) ಬಿಹೂ. ಇದನ್ನು ಕಾಟಿ ಬಿಹೂ ಎಂದೂ ಕರೆಯುತ್ತಾರೆ. ಇಲ್ಲಿ ತುಳಸೀ ಸಹಿತ ದೀಪ ಹೊತ್ತಿಸುವುದು ಪ್ರಮುಖ ಆಕರ್ಷಣೆ. ಮನರಂಜನೆ ಆಚರಿಸುವುದಿಲ್ಲ. ಜನವರಿಯಲ್ಲಿ ಮಕರ ಸಂಕ್ರಾಂತಿಗೆ ಬರುವುದು ಭೊಗಾಲೀ ಬಿಹೂ.ಇದನ್ನು ಮಾಘ ಬಿಹೂ ಎಂದೂ ಕರೆಯುತ್ತಾರೆ. ಅಂದು ಅಗ್ನಿ ದೇವತೆಗೆ ಪೂಜೆ. ಬಿದಿರಿನಿಂದ ಸಣ್ಣ ಮಂದಿರದ ಆಕೃತಿ ಮಾಡುತ್ತಾರೆ.ಸ್ನಾನದ ನಂತರ ಬೆಂಕಿ ಹಚ್ಚಿ ಪೂಜಿಸುತ್ತಾರೆ.**

## ಪ್ರೀತಿಯ ಸಂಕೇತ ಗಮೊಛಾ

**ಬಿಹೂನಲ್ಲಿ ಗಮೊಛಾ ಅಥವಾ ಗಮೋಸಾಕ್ಕೆ ಎಲ್ಲಕ್ಕಿಂತ ಅಧಿಕ ಮಹತ್ವ. ಬಟ್ಟೆನೂಲಿನಿಂದ ಇದನ್ನು ತಯಾರಿಸುತ್ತಾರೆ. ಕರೋನಾ ಕಾಲದಲ್ಲಿ ಇನ್ನು ಮಾಸ್ಕ್ ರೂಪದಲ್ಲಿಯೂ ಬಳಸುತ್ತಿದ್ದರು. ಗಮೊಛಾ ಅಸ್ಸಾಮ್ ಜನರ ಸಾಂಸ್ಕೃತಿಕ ಮತ್ತು ಪ್ರಾದೇಶಿಕ ಗುರುತಿನ ಒಂದು ವಸ್ತ್ರ ಇದಕ್ಕೆ ಮೂರು ರೀತಿಯ ಕೆಂಪು ಬಣ್ಣದ ಅಂಚು ಇರುತ್ತದೆ. ಇದು ಅಸ್ಸಾಮಿ ಸಂಸ್ಕೃತಿಗೆ ಮಾಧುರ್ಯ ನೀಡುತ್ತದೆ. ಅಸ್ಸಾಮಿ ಸಮಾಜದಲ್ಲಿ, ಯುವತಿಯೊಬ್ಬಳು ತನ್ನ ಮನೆಯ ಮಗ್ಗದಲ್ಲಿ ಬಹಳ ಪ್ರೀತಿಯಿಂದ ಹಾಡನ್ನು ಹಾಡುವ ಮೂಲಕ ಗಮೋಚಾ (ಬಿಹುವಾನ್) ವನ್ನು ಸಿದ್ಧಪಡಿಸುತ್ತಾಳೆ, ಅದನ್ನು ಕೆಂಪು ಬಣ್ಣದ ಹತ್ತಿಯಿಂದ ಕಸೂತಿ ಮಾಡಿ ಮತ್ತು ಆ ಗಮೋಛಾವನ್ನು ತನ್ನ ಪ್ರಿಯತಮನಿಗೆ ಅರ್ಪಿಸುವ ಮೂಲಕ ತನ್ನ ಪ್ರೀತಿಯನ್ನು ವ್ಯಕ್ತಪಡಿಸುತ್ತಾಳೆ. ಮತ್ತು ಯುವಕನು ತನ್ನ ಹಣೆಯಲ್ಲಿ ಗಮೋಛಾವನ್ನು ಸುತ್ತಿಕೊಳ್ಳುವ ಮೂಲಕ ಬಿಹೂ ನೃತ್ಯವನ್ನು ಪ್ರಾರಂಭಿಸುತ್ತಾನೆ. ಯುವತಿಯು ಚಿನ್ನದ ಬಣ್ಣದ ಮೇಖಲಾ ಮತ್ತು ಹವಳದ ಹಾಳೆಯನ್ನು ಧರಿಸಿ ಅವನನ್ನು ಹಿಂಬಾಲಿಸುತ್ತಾಳೆ ಮತ್ತು ಇಬ್ಬರೂ ಬಿಹೂ-ಬಿಹೂ ಲಗೀ ಸೇ, ತುಮಾಕೆ ಮರಮ್ ಕೊರಾ ಮನ್ ಗೋಯ್ ಸೇ ಗೀತೆ ಹಾಡುತ್ತಾರೆ.**



## ಜಾಪೀ ಎಂಬ ಟೋಪಿ

**ಅಸ್ಸಾಮ್‌ನ ಕೃಷಿಯಾಧಾರಿತ ಜೀವನದಲ್ಲಿ ಮಳೆ ಬಿಸಿಲಿಗೆ ರಕ್ಷಣೆ ನೀಡಲು 'ಜಾಪೀ' ಸಹಾಯ ಮಾಡುತ್ತದೆ. ಬಿಹೂ ನೃತ್ಯದಲ್ಲಿ ಜಾಪೀಯನ್ನು ಹಿಡಿದುಕೊಂಡು ಮಹಿಳೆಯರು ವಿವಿಧ ಭಂಗಿಯಲ್ಲಿ ನೃತ್ಯ ಮಾಡುವುದಿದೆ. ಜಾಪೀ ಎಂದರೆ ಅಸ್ಸಾಮ್‌ನ ಟೋಪಿ. ಕನಿಷ್ಠ 20 ಲಕ್ಷ ಜನರಿಗೆ ಇದು ಉದ್ಯೋಗವನ್ನು ನೀಡಿದೆ. ಶಹರೀಕರಣದ ಹೊರತಾಗಿಯೂ ಜಾಪೀ ಮತ್ತು ಗಮೊಛಾ ಅಸ್ಸಾಮ್‌ನ ಸಾಂಸ್ಕೃತಿಕ ಪರಂಪರೆಯನ್ನು ಜೀವಂತ ಇರಿಸುತ್ತಾ ಬಂದಿದೆ. ಅಸ್ಸಾಮ್‌ನಲ್ಲಿ ಬಿಹೂ ಸಮಯ ಪ್ರಿಯತಮನಿಗೆ ಗಮೊಛಾ ಮತ್ತು ಜಾಪೀ ನೀಡಿ ತನ್ನ ಪ್ರೇಮವನ್ನು ಯುವತಿ ವ್ಯಕ್ತಪಡಿಸುತ್ತಾಳೆ. ಬಿಹೂ ಸಮಯ ಪ್ರತಿಯೊಬ್ಬ ಅಸ್ಸಾಮೀ ಪುರುಷ - ಮಹಿಳೆ ಹೊಸ ಗಮೊಛಾ ಹಿಡಿದು ತೆರಳುತ್ತಾರೆ. ಇದರಿಂದಾಗಿ ಗಮೊಛಾ ಕ್ಕೆ ಬೇಡಿಕೆಯೂ ಏರುತ್ತದೆ. ಜಾಪೀ ಮತ್ತು ಗಮೋಛಾ ಅಸ್ಸಾಮ್‌ನ ಅರ್ಥ ವ್ಯವಸ್ಥೆಯ ಆಧಾರವೂ ಆಗಿರುತ್ತದೆ.**

## ಕೈಮಗ್ಗದ ನೇಯ್ಗೆ

ಬಿಹೂ ಸಂಪ್ರದಾಯದಿಂದಾಗಿ ಅಸ್ಸಾಂನಲ್ಲಿ ಲಕ್ಷಾಂತರ ಮನೆಗಳು ಕೈಮಗ್ಗದಲ್ಲಿ ಗಮೋಛಾ ತಯಾರಿಸುತ್ತಾರೆ. ಇಲ್ಲಿ ಗ್ರಾಮೀಣ ಹುಡುಗಿ ನೇಯುತ್ತಾಳೆ. ಬಟ್ಟೆ ನೇಯುವ ಸಂಪ್ರದಾಯ ಜೀವಂತವಾಗಿರುವಾಗ ಮಾತ್ರ ಆ ಮನೆಯವರು ಮದುವೆಗೆ ಅರ್ಹರೆಂದು ಪರಿಗಣಿಸಲ್ಪಟ್ಟದ್ದು ಗಮೋಛಾ ನೇಯುವ ಕಾರಣದಿಂದಾಗಿ. ನಗರದ ಯುವತಿಯರು ಮಾರುಕಟ್ಟೆಯಲ್ಲಿ ಗಮೋಛಾವನ್ನು ಖರೀದಿಸುವ ಮೂಲಕ ಕೈಮಗ್ಗ ಸಂಸ್ಕೃತಿಗೆ ಬೆಂಬಲ ನೀಡುತ್ತಾರೆ. ಬಿಹೂ ಹಬ್ಬಕ್ಕೆ ಗಮೋಛಾ ಬೇಕೇಬೇಕು. ಗಮೋಛಾ ಅಸ್ಸಾಮಿ ಗ್ರಾಮೀಣ ಆರ್ಥಿಕತೆಯು ಕನಿಷ್ಠ ಎರಡು ಮಿಲಿಯನ್ ಜನರಿಗೆ ಅವಕಾಶ ನೀಡಿ, ಜೀವಂತವಾಗಿದೆ. ಇಲ್ಲಿ ರಹಸ್ಯವಾಗಿ ಯಾವ ಕೆಲಸವನ್ನೂ ಮಾಡುವುದಿಲ್ಲ. ಅವರು ಯಾರನ್ನು ಪ್ರೀತಿಸುತ್ತಿದ್ದರು ಎಂಬುದು ಅವರ ಮನೆಯಲ್ಲಿ ಎಲ್ಲರಿಗೂ ತಿಳಿದಿದೆ. ಮದುವೆಯ ತನಕ, ಆ ಹುಡುಗಿ ಪ್ರತಿ ಬಿಹೂವಿನಲ್ಲೂ ತನ್ನ ಪ್ರಿಯಕರನಿಗೆ ಬಿಹುವನ್ ನೀಡುತ್ತಲೇ ಇರುತ್ತಾಳೆ. ಅಸ್ಸಾಮ್‌ನ ಯಾವುದೇ ಮನೆಗೆ ನೀವು ಅತಿಥಿಯಾಗಿ ಹೋದರೆ, ಹೊರಡುವಾಗ ನಿಮ್ಮನ್ನು ಗಮೋಛಾವನ್ನು ಧರಿಸಿ ಕಳುಹಿಸಲಾಗುತ್ತದೆ. ಏಕೆಂದರೆ ಕೆಂಪು ಬಣ್ಣವು ಪ್ರೀತಿಯನ್ನು ಸಂಕೇತಿಸುತ್ತದೆ.

ನಮ್ಮ ನಾಡಿನ ಸೌರಮಾನ ಯುಗಾದಿಗೆ ಸಮಾನಾಂತರವಾಗಿರುವ ಅಸ್ಸಾಮ್‌ನ ಬಿಹೂ, ಇಂದಿಗೂ ತನ್ನ ರಂಗು ರಂಗಿನ ಆಚರಣೆಗಳನ್ನು ಉಳಿಸಿಕೊಂಡು ಬಂದಿರುವುದು ವಿಶೇಷ. ನೃತ್ಯ, ಗಮೊಛಾ, ಜಾಪೀ, ಪರಸ್ಪರ ಗೌರವಿಸುವುದು ಈ ಹಬ್ಬದ ಆಚರಣೆ ಎನಿಸಿದರೆ, ಯುವಕ ಯುವತಿಯರು ಪ್ರೀತಿಯನ್ನು ಹುಡುಕುವ ರಂಗಭೂಮಿಗೂ ಬಿಹೂ ಅವಕಾಶ ನೀಡಿರುವುದು ವಿಶೇಷ.

---



# ಸಾರ್ಥಕತೆಯ ಹಾದಿ

● ಮಹಾದೇವ ಬಸರಕೋಡ

ನಾವು ಇತ್ತೀಚಿನ ದಿನಗಳಲ್ಲಿ ನಾಗರಿಕತೆಯ ನೆಪದಲ್ಲಿ ನಮ್ಮ ಸುತ್ತಲಿನ ಸುಂದರ ಸಂಬಂಧಗಳಿಂದ ದೂರಕ್ಕೆ ಸರಿಯುತ್ತಿದ್ದೇವೆ. ಯಾವುದೋ ಒಂದು ಮೂಲೆಯಲ್ಲಿ ಪ್ರತ್ಯೇಕವಾಗಿ ನಿಲ್ಲುತ್ತಿದ್ದೇವೆ. ನಮ್ಮ ಮನೆಗಳು ದೊಡ್ಡದಾಗುತ್ತಿರುವಂತೆ, ಮನಸ್ಸುಗಳು ತುಂಬ ಕಿರಿದಾಗುತ್ತಿದೆ. ನಾನು ಮತ್ತು ನನ್ನದೆಂಬ ಮಂತ್ರವೇ ಪ್ರಧಾನವಾಗುತ್ತಿದೆ. ಸ್ವಾರ್ಥವೇ ಬದುಕಿನ ಪರಮಧ್ಯೇಯವಾಗಿಬಿಟ್ಟಿದೆ. ಸ್ವಪ್ರಯೋಜನವನ್ನೆ ನಮ್ಮ ನಿಲುವಾಗಿಸಿಕೊಂಡು ವೈಯಕ್ತಿಕ ಅಪೇಕ್ಷೆಗಳ ತಣಿವನ್ನು ಹಿಂಗಿಸಿಕೊಳ್ಳುವಲ್ಲಿಯೇ ನಮ್ಮೆಲ್ಲ ಧಾವಂತ. ಇನ್ನೂ ಬೇಕು ಮತ್ತಷ್ಟು ಬೇಕು ಎಂಬ ಬಯಕೆಯ ಬೇಲಿಯೊಳಗೆ ಬಂಧಿಯಾಗಿ ನಮ್ಮ ಬದುಕನ್ನು ಪರಿಮಿತಗೊಳಿಸುತ್ತಿದ್ದೇವೆ. ವೈಯಕ್ತಿಕ ಅಪೇಕ್ಷೆಗಳ ತಣಿವು ಕ್ಷಣಕಾಲದ ತೃಪ್ತಿಯ ತಹತಹವನ್ನು ಮಾತ್ರವೇ ತಣಿಸಬಲ್ಲದು. ಬಹಿರಂಗದ ತಣಿವನ್ನು ಅದೇಷ್ಟೆ ಹಿಂಗಿಸಿಕೊಂಡರೂ ಅದು ಹನುಮಂತನ ಬಾಲದಂತೆ ಬೆಳೆಯುತ್ತಲೇ ಹೋಗುತ್ತದೆ. ಇದರಿಂದ ನಮಗೆ ಮತ್ತಷ್ಟು ನಿರಾಸೆ ಭಾವ, ಅತೃಪ್ತಿ ಹೆಚ್ಚುತ್ತಲೇ ಹೋಗುತ್ತದೆ. ಇಂತಹ ನಮ್ಮ ಮನೋಸ್ಥಿತಿಯನ್ನು ಕಂಡ ಡಿ.ವಿ.ಜಿ ಇದರಿಂದ ಪಾರಾಗುವ ಸರಳ ಉಪಾಯವೊಂದನ್ನು ತಮ್ಮ ಕಗ್ಗದಲ್ಲಿ ಬಿಡಿಸಿಟ್ಟಿದ್ದಾರೆ.

ಗುಡಿಯ ಪೂಜೆಯೊ, ಕಥೆಯೊ, ಸೊಗಸು
ನೋಟವೊ, ಹಾಡೊ ।
ಬಡವರಿಂಗುಪಕೃತಿಯೊ, ಅವುದೋ ಮನದ ॥
ಬಡಿದಾಟವನು ನಿಲಿಸಿ ನೆಮ್ಮದಿಯನೀವೊಡದೆ ।
ಬಿಡುಗಡೆಯೊ ಜೀವಕ್ಕೆ-ಮಂಕುತಿಮ್ಮ.

ಮನಸ್ಸಿಗೆ ಸಮಾಧಾನ ಭಾವ ತರುವ ಗುಡಿಯ ಪೂಜೆ ಮಾಡುವಲ್ಲಿ, ಬದುಕಿಗೆ ಮಾರ್ಗದರ್ಶಿಯಾಬಲ್ಲ ಕಥೆಯನ್ನು ಕೇಳುವಲ್ಲಿ, ಮನಸ್ಸಿಗೆ ಆಹ್ಲಾದಕರ ಅನುಭವ ನೀಡುವ ಸುಂದರ ನೋಟವನ್ನು ನೋಡುವಲ್ಲಿ, ಮನಸ್ಸನ್ನು ಹಗುರಾಗಿಸುವ ಹಾಡನ್ನು ಹಾಡುವಲ್ಲಿ ಬಡವರಿಗೆ, ನೊಂದವರಿಗೆ, ಬೆಂದವರಿಗೆ ಸಹಾಯಹಸ್ತ ಚಾಚುವಲ್ಲಿ, ಇನ್ನು ಹತ್ತು ಹಲವು ಸಮಾಜಮುಖಿಯಾದ ವಿಭಿನ್ನ ಕಾರ್ಯಗಳಲ್ಲಿ ನಾವು ತೊಡಗಿಸಿಕೊಳ್ಳಬೇಕು. ಅದು ಮನಸ್ಸಿನ ಹೊಯ್ದಾಟವನ್ನು ನಿಲ್ಲಿಸಿ ಆನಂದದ ಅನುಭೂತಿ ನೀಡುವಲ್ಲಿ ಸಾಧ್ಯವಾದರೆ, ಅದುವೇ ಬಿಡುಗಡಯ ಮಾರ್ಗ ಎನ್ನುವುದು ಅವರ ಖಚಿತ ನುಡಿಯಾಗಿದೆ. ಟ್ಯಾಗೋರರ ಕಥೆಯೊಂದಿದೆ.

ಹುಡುಗಿಯೊಬ್ಬಳ ತಂದೆ ತಾಯಿ ದುಡಿಯಲು ಮನೆಯಿಂದ ಹೊರಗೆ ಹೋಗಿದ್ದರು. ಅವರಿಬ್ಬರೂ ಮುಂಜಾನೆಯಿಂದ ಸಂಜೆಯವರೆಗೂ ದುಡಿದರೂ ಸಂಸಾರ ನಿರ್ವಹಣೆಗೆ ನಿಲುಕಷ್ಟೇ ದುಡಿಮೆ. ಇದನ್ನರಿತ ಹುಡುಗಿ ತನ್ನ ಮನೆಯಲ್ಲಿ ಎಲ್ಲ ಕೆಲಸವನ್ನು ಮಾಡಿ ತನ್ನ ತಂದೆ ತಾಯಿಗೆ ನೆರವಾಗಿದ್ದಳು. ಕಸಗುಡಿಸುವುದು, ಬಟ್ಟೆತೊಳೆಯುವುದು, ಪಾತ್ರೆಗಳನ್ನು ತಿಕ್ಕಿ ತಿಕ್ಕಿ ಸ್ವಚ್ಛವಾಗಿಸುವುದು ಅವಳ ದೈನಂದಿಕನ ಕಾರ್ಯವಾಗಿತ್ತು. ಅದರಲ್ಲಿ ಅವಳು ಸಂತೋಷ ಪಡುತ್ತಿದ್ದಳು. ಒಂದು ದಿನ ತನ್ನ ಮನೆಗೆ ನೀರು ತುಂಬಿಸುವ ಕಾರ್ಯದಲ್ಲಿ ತೊಡಗಿದ್ದಳು. ಅವಳಿಗೆ ಅನತಿ ದೂರದಲ್ಲಿಯೆ ಅವಳ ತಮ್ಮ ಮಣ್ಣಿನಲ್ಲಿ ಆಟವಾಡುತ್ತಿದ್ದ. ಅವನನ್ನು ಗಮನಿಸುತ್ತಲೇ ತನ್ನ ಕೆಲಸದಲ್ಲಿ ಅವಳು ತಲ್ಲೀನಳಾಗಿದ್ದಳು. ಅವನ ಮೈಮೇಲೆ ಒಂಚೂರು ಬಟ್ಟೆ ಇರಲಿಲ್ಲ. ಅವಳು ಎಷ್ಟೇ ಹೇಳಿದರೂ ಅವನು ಕೇಳುವ ಸ್ಥಿತಿಯಲ್ಲಿ ಇರಲಿಲ್ಲ. ಮೈಗೆಲ್ಲ ಮಣ್ಣು ಅಂಟಿಸಿಕೊಂಡು ಅದರಲ್ಲಿಯೇ ಮುಳಗಿಹೋಗಿದ್ದ. ಅದರಲ್ಲಿಯೇ ಅವನು ಸಂತೋಷ ಪಡುತ್ತಿದ್ದ. ಸಂಭ್ರಮಿಸುತ್ತಿದ್ದ. ಇವಳೂ ಕೂಡ ಅವನನ್ನು ನೋಡುತ್ತಲೇ ಸಂತೋಷದಲ್ಲಿ ಪಾಲ್ಗೊಂಡಿದ್ದಳು.

ಇದ್ದಕ್ಕಿಂದಂತೆ ಅವರು ಸಾಕಿದ ಕುರಿಮರಿಯೊಂದು ಹುಡುಗನ ಬಳಿ ಹೋಗಿ ನಿಲ್ಲುತ್ತದೆ. ಅವನು ಹೆದರಿ, ಗಾಬರಿಯಾಗಿ ಅಕ್ಕಾ ಎಂದು ಚೀರಿದ. ತಕ್ಷಣಕ್ಕೆ ಅವಳು ತನ್ನ ಕೈಯಲ್ಲಿದ್ದ ಬಿಂದಿಗೆಯನ್ನು ಅಲ್ಲಿಯೇ ಬೀಸಾಕಿ ಅತ್ತ ಓಡುತ್ತಾಳೆ. ಅವನನ್ನು ಬಲಗೈಯಿಂದ ಬಾಚಿ ತಪ್ಪಿಕೊಳ್ಳುತ್ತಾಳೆ. ಎಡಗೈಯಿಂದ ಕುರಿಮರಿಯನ್ನು ಪ್ರೀತಿಯಿಂದ ಅಪ್ಪಿಕೊಳ್ಳುತ್ತಾಳೆ. ಇಬ್ಬರನ್ನೂ ತನ್ನೆದೆಗೆ ಅಪ್ಪಿಕೊಂಡು ರಮಿಸುತ್ತಾಳೆ. ಬದುಕಿನಲ್ಲಿ ಎಲ್ಲ ಭೋಗ್ಯ ಭಾಗ್ಯ ಪಡೆದಿದ್ದರೂ ಮನಸ್ಸಿನ ಸಂತೋಷ, ಶಾಂತಿ, ನೆಮ್ಮದಿ ಇರದೇ ಅದನ್ನು ಅರಸುತ್ತಿದ್ದ ಅಲ್ಲಿಯೇ ಇದ್ದ ವ್ಯಕ್ತಿಯೊಬ್ಬ ಇದನ್ನೆಲ್ಲ ಗಮನಿಸಿ ಬೆರಗುಗೊಂಡ. ಅವಳು ಪ್ರೀತಿಯನ್ನು ಹಂಚಿಕೊಂಡ ಪರಿಯನ್ನು ಕಂಡು ತನ್ನ ಸಮಸ್ಯೆಗೆ ಪರಿಹಾರ ಕಂಡುಕೊಂಡಿದ್ದ. ಅವನಲ್ಲಿ ಅವನಿಗೆ ಅರಿವಿಲ್ಲದಂತೆ ಆನಂದಭಾಷ್ಪ ಕಣ್ಣಂಚಿನಲ್ಲಿ ಇಣುಕಿ ಬಂದಿತ್ತು. ಸತ್ಯದ ಅರಿವಾಗಿತ್ತು.

ಬಹಿರಂಗದ ತಣಿವಿಂದ ಸಂತೋಷ ಲಭಿಸುವುದು ಕಷ್ಟಸಾಧ್ಯದ ಮಾತು. ಅದು ವೈಯಕ್ತಿಕ ಸುಖದ ಸೆಳೆತವನ್ನು ಮೀರಿ ತನ್ನಿಂದಾಚೆಗೆ ವ್ಯಕ್ತಿತ್ವ ಹರಿದು ಸುತ್ತಣ ಬದುಕಿನೊಂದಿಗೆ ಬೆರೆಯುವದರಿಂದ ಮಾತ್ರವೇ ಲಭಿಸತಕ್ಕದ್ದು. ಬದುಕಿನ ನಿಜವಾದ ಸಂತೋಷ ಅಂತರಂಗದ ತೃಪ್ತಿಯಾಗಿದೆ. ಇಂತಹ ಸಂತೋಷ ನಮ್ಮದಾದಾಗ ಸಾರ್ಥಕ ಬದುಕು ಸಾಧ್ಯ.